### ಜಿಲ್ಲಾ ಧಾರಣಾ ಸಾಮರ್ಥ್ಯದ ಅಧ್ಯಯನ ವರದಿ ಸಲ್ಲಿಕೆ

# ಕೇಂದ್ರ ಸಚಿವರ ಜತೆ ಸಂವಾದಕ್ಕೆ ಯತ್ನ

**ವಿಕ ಸುದ್ದಿಲೋಕ**, ಶಿರಸಿ

ಸಮಗ್ರ ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯದ ಅಧ್ಯಯನದ ಬಗ್ಗೆ ಕೇಂದ್ರ ಸರಕಾರದ ಗಮನ ಸೆಳೆಯುವಂತೆ ಪರಿಸರ ಪ್ರಮುಖರ ತಂಡವು ಸಂಸದ  ಹೆಗಡೆ ಅವರಲ್ಲಿ ವಿನಂತಿಸಿದೆ. ಕೇಂದ್ರ ಪರಿಸರ ಅರಣ್ಯ ಸಚಿವರ ಜತೆ ಸಂವಾದ ಏರ್ಪಡಿಸುವ ಭರವಸೆಯನ್ನು ಸಂಸದ ಅನಂತಕುಮಾರ ಹೆಗಡೆ ಪರಿಸರ ವಿಜ್ಞಾನಿಗಳ ನಿಯೋಗಕ್ಕೆ ನೀಡಿದರು ಎಂದು ಪ್ರಕಟಣೆ ತಿಳಿಸಿದೆ.

ಪರಿಸರ ವಿಜ್ಞಾನಿಗಳ ತಂಡವು ಸಂಸದ ಅನಂತಕುಮಾರ ಹೆಗಡೆ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆ ಪರಿಸರ ಧಾರಣಾ ಸಾಮರ್ಥ್ಯದ ಸಮಗ್ರ ವರದಿ ಸಂಸದರಿಗೆ ನೀಡಲಾಯಿತು.

ಈ ಅಧ್ಯಯನ ವರದಿಯನ್ನು ಸರಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದೆ. ನಾಲ್ಕು ವರ್ಷಗಳ ಹಿಂದೆ ರಾಜ್ಯ ಸರಕಾರವು ಪಶ್ಚಿಮಘಟ್ಟ ಕಾರ್ಯಪಡೆ ಶಿಫಾರಸಿನ ಮೇರೆಗೆ ಉತ್ತರಕನ್ನಡ ಜಿಲ್ಲೆಯ ಪರಿಸರ ಧಾರಣಾ ಸಾಮರ್ಥ್ಯದ ಅಧ್ಯಯನ ನಡೆಸಲು ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರಕ್ಕೆ ಜವಾಬ್ದಾರಿ ನೀಡಿತ್ತು. ಅಂತೆಯೇ 2013 ರಲ್ಲಿ ಅಂತಿಮ ಪೂರ್ವ ವರದಿಯನ್ನು ಜನತೆ ಮುಂದೆ ಮಂಡಿಸಲಾಗಿತ್ತು. ಇದೀಗ ರಾಜ್ಯ ಜೀವ ವೈವಿಧ್ಯ ಮಂಡಳಿಗೆ ಸಮಗ್ರವಾದ 540 ಪುಟಗಳ ಅಂತಿಮ ವರದಿ ಸಲ್ಲಿಸಲಾಗಿದೆ. ಇದೇ ಮಾದರಿಯಲ್ಲಿ ಸಮಗ್ರ ಪಶ್ಚಿಮಘಟ್ಟದ ಪರಿಸರ ಅಧ್ಯಯನ ನಡೆಸಬೇಕು. ಈ ಬಗ್ಗೆ ಕೇಂದ್ರ ಪರಿಸರ ಅರಣ್ಯ ಮಂತ್ರಾಲಯಕ್ಕೆ ಮನವಿ ಮಾಡಬೇಕು ಎಂದು ಪರಿಸರ ಕಾರ್ಯಕರ್ತರು, ವಿಜ್ಞಾನಿಗಳ ನಿಯೋಗವು ಸಂಸದರಲ್ಲಿ ವಿನಂತಿಸಿತು.

**ಮುಖ್ಯ ಅಂಶಗಳು..**

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪರಿಸ್ಥಿತಿ; ಬೃಹತ್ ಅರಣ್ಯ ನಾಶೀ ಯೋಜನೆಗಳ ದುಷ್ಪರಿಣಾಮಗಳು; ಇಂಧನ ಪರಿಸ್ಥಿತಿ; ಅರಣ್ಯ ಛಿದ್ರಗೊಳ್ಳುವಿಕೆ; ಕರಾವಳಿ ಪರಿಸ್ಥಿತಿ; ಸಾಂಸ್ಕೃತಿಕ ಪರಿಸರ ವೈವಿಧ್ಯ; ಜಾಗತಿಕ ಮಹತ್ವ ಇರುವ ಪರಿಸರ ಸೂಕ್ಷ್ಮ ಪ್ರದೇಶ; ಅಂತರ್ಜಲ ಹಾಗೂ ಜೀವ ವೈವಿಧ್ಯ ಕುರಿತು ಧಾರಣಾ ಸಾಮರ್ಥ್ಯ ಕುರಿತ ಸಮಗ್ರ ಅಧ್ಯಯನ ವರದಿಯಲ್ಲಿ ತಿಳಿಸಲಾಗಿದೆ. ಅಲ್ಲದೇ ನದಿ ಕಣಿವೆಗಳ ಮೌಲ್ಯ; ಜಿಲ್ಲೆಯ ಸುಸ್ಥಿರ ಅಭಿವೃದ್ಧಿ ಮಾದರಿ, ಪರಿಸರ ಪ್ರವಾಸೋದ್ಯಮ, ಜಾನುವಾರು ಪರಿಸ್ಥಿತಿ; ಸ್ಥಾನಿಕ ಮಟ್ಟದ ಅಭಿವೃದ್ಧಿ ಯೋಜನೆ ರೂಪುರೇಷೆ ಹೀಗೆ 38 ಅಂಶಗಳ ಮೇಲೆ ವಿಶೇಷ ಅಧ್ಯಯನ ನಡೆಸಲಾಗಿದೆ ಎಂಬ ಮಾಹಿತಿಯನ್ನು ಪರಿಸರ ವಿಜ್ಞಾನಿಗಳ ತಂಡ ಕೆನರಾ ಸಂಸದರಿಗೆ ನೀಡಿತು.

ಪಶ್ಚಿಮಘಟ್ಟ ಕಾರ್ಯಪಡೆಯ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ವಿಜ್ಞಾನಿಗಳಾದ ಟಿ.ವಿ ರಾಮಚಂದ್ರ, ಪ್ರೊ. ಸುಭಾಸ್‌ಚಂದ್ರನ್ ತಂಡದಲ್ಲಿದ್ದು ಸಮಗ್ರ ಪಶ್ಚಿಮ ಘಟ್ಟದಲ್ಲಿ ಇದೇ ಮಾದರಿಯ ಅಧ್ಯಯನ ನಡೆಸುವ ಬಗ್ಗೆ ಕೇಂದ್ರದ ಗಮನ ಸೆಳೆಯಬೇಕು ಎಂದು ಇದೇ ಸಂದರ್ಭದಲ್ಲಿ ಅಭಿಪ್ರಾಯಪಟ್ಟರು.



ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನದ ವರದಿ ಪ್ರತಿಯನ್ನು ಸ್ವರ್ಣವಲ್ಲೀ ಶ್ರೀಗಳಿಗೆ ವಿಜ್ಞಾನಿಗಳ ತಂಡವು ನೀಡಿತು.



ಸಂಸದ ಅನಂತಕುಮಾರ ಹೆಗಡೆ ಅವರಿಗೆ ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನದ ವರದಿ ನೀಡಿದ ಪರಿಸರ ಪ್ರಮುಖರ ತಂಡವು ಅವರೊಂದಿಗೆ ಚರ್ಚಿಸಿತು.

### ಸ್ವರ್ಣವಲ್ಲೀ ಸ್ವಾಮೀಜಿ ಭೇಟಿ

ಉತ್ತರ ಕನ್ನಡ ಜಿಲ್ಲಾ ಧಾರಣಾ ಸಾಮರ್ಥ್ಯ ಅಧ್ಯಯನ ಕಾಯಿದೆ ಆರಂಭ ಹಾಗೂ ಅಂತಿಮ ಪೂರ್ವದ ಸಮಾಲೋಚನಾ ಸಭೆಗಳಲ್ಲಿ ಸಾನ್ನಿಧ್ಯ ನೀಡಿದ್ದ ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಗೌರವಾಧ್ಯಕ್ಷರಾದ ಸ್ವರ್ಣವಲ್ಲೀ ಸ್ವಾಮೀಜಿ ಅವರಿಗೆ ಧಾರಣಾ ಸಾಮರ್ಥ್ಯ ಕುರಿತು ಸಮಗ್ರ ಅಧ್ಯಯನ ವರದಿಯನ್ನು ವಿಜ್ಞಾನಿಗಳ ತಂಡವು ಮಠಕ್ಕೆ ತೆರಳಿ ನೀಡಿದೆ. ಉತ್ತರ ಕನ್ನಡ ಜಿಲ್ಲೆಯ ಸಮಗ್ರ ಪರಿಸರ ಅಧ್ಯಯನದ ನಂತರ ಶಿವಮೊಗ್ಗಾ, ಚಿಕ್ಕಮಗಳೂರು ಜಿಲ್ಲೆಗಳ ಅರಣ್ಯ ಪರಿಸ್ಥಿತಿ ಅಧ್ಯಯನ ನಡೆಸಿದ್ದೇವೆ ಎಂದು ವಿಜ್ಞಾನಿಗಳಾದ ಟಿ.ವಿ. ರಾಮಚಂದ್ರ ಮತ್ತು ಹರೀಶ್ ಭಟ್ಟ ಸ್ವರ್ಣವಲ್ಲೀ ಶ್ರೀ ಗಳಿಗೆ ತಿಳಿಸಿದರು.

ನಂತರ ಜುಲೈ ತಿಂಗಳಲ್ಲಿ ಕೇಂದ್ರ ಪರಿಸರ ಅರಣ್ಯ ಸಚಿವರ ಜತೆ ಸಂವಾದ ಏರ್ಪಡಿಸುವ ಭರವಸೆಯನ್ನು ಸಂಸದ ಅನಂತಕುಮಾರ ಹೆಗಡೆ ಪರಿಸರ ವಿಜ್ಞಾನಿಗಳ ನಿಯೋಗಕ್ಕೆ ನೀಡಿದರು ಎಂದು ಪ್ರಕಟಣೆ ತಿಳಿಸಿದೆ.